# ಲಗಾನ್@20

■ ವಿಶಾಖ ಎನ್

ಕೋವಿಡ್ ಕಾರಣಕ್ಕೆ ಆಗಿರುವ ಲಾಕ್‌ಡೌನ್ ಅನೇಕ ಸಂಭ್ರಮಗಳ ಮೆಲುಕಿಗೆ ಪುರುಸೊತ್ತು ಒದಗಿಸಿದೆ. 2001ರಲ್ಲಿ ತೆರೆಕಂಡು ದೊಡ್ಡ ಹಿಟ್ ಆಗಿದ್ದ ಚಿತ್ರ ‘ಲಗಾನ್’. ಈ ಸಿನಿಮಾ ತಂಡವು ಇತ್ತೀಚೆಗೆ ಆನ್‌ಲೈನ್ ಸಂವಾದ ಏರ್ಪಡಿಸಿತ್ತು. ಜೂನ್ 15ಕ್ಕೆ ಈ ಚಿತ್ರ ತೆರೆಕಂಡು ಇಪ್ಪತ್ತು ವರ್ಷಗಳು ಪೂರೈಸಿದ್ದೇ ಇದಕ್ಕೆ ನೆಪ.




ನಟ ಅಮೀರ್ ಖಾನ್, ನಿರ್ದೇಶಕ ಆಶುತೋಷ್ ಗೋವಾರಿಕರ್, ಸ್ವರ ಸಂಯೋಜಕ ಎ.ಆರ್. ರೆಹಮಾನ್, ಇಂಗ್ಲೆಂಡ್‌ನ ನಟನಟಿಯರಾದ ಪಾಲ್ ಬ್ಲ್ಯಾಕ್‌ಥೋರ್ನ್, ರಶೆಲ್ ಶೆಲ್ಲಿ ಅಲ್ಲದೆ ಚಿತ್ರದಲ್ಲಿ ಅಭಿನಯಿಸಿದ್ದ ಕೆಲವರು ಸಂವಾದದಲ್ಲಿ ಭಾಗವಹಿಸಿದ್ದರು. ಅದರ ಸ್ಕ್ರೀನ್ ಶಾಟ್ ಅನ್ನು ರೆಹಮಾನ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡರು. ಏನೆಲ್ಲ ಮಾತುಕತೆ ನಡೆಯಿತು ಎನ್ನುವುದನ್ನು ಮಾತ್ರ ಅವರು ಗುಟ್ಟಾಗಿಯೇ ಇಟ್ಟಿದ್ದಾರೆ. ಯೂಟ್ಯೂಬ್‌ನಲ್ಲಿ ಅದರ ಸಂಪೂರ್ಣ ಸಾರ ನೋಡುಗರಿಗೆ ಲಭ್ಯವಾಗಲಿದೆ. ನೆಟ್‌ಫ್ಲಿಕ್ಸ್ ಕೂಡ ‘ಲಗಾನ್’ ಬಿಡುಗಡೆಯಾಗಿ 20 ವರ್ಷ ಪೂರೈಸಿದ ಸಂದರ್ಭದಲ್ಲಿ ಕಾರ್ಯಕ್ರಮವೊಂದನ್ನು ಪ್ರಸಾರ ಮಾಡುವುದಾಗಿ ಹೇಳಿದೆ.

‘ಲಗಾನ್’ ಚಿತ್ರ ತಯಾರಾದದ್ದು ಸುದೀರ್ಘ ಪ್ರಕ್ರಿಯೆ. ಆಶುತೋಷ್ ಮೊದಲು ಚಿತ್ರಕಥೆ ಸಿದ್ಧಪಡಿಸಿಕೊಂಡು ಅಮೀರ್ ಖಾನ್ ಅವರನ್ನು ಭೇಟಿಯಾದರು. ಕ್ರೀಡಾ ಕಥನದ ಸಿನಿಮಾ ಬೇಡವೇ ಬೇಡ ಎಂದು ಮೊದಲು ಅಮೀರ್ ಹೇಳಿಬಿಟ್ಟರು. ಆಶುತೋಷ್ ಸಂಭಾಷಣೆಯನ್ನೆಲ್ಲ ಬರೆದು ಮುಗಿಸಿದ ಮೇಲೆ ಒಂದು ರೀಡಿಂಗ್ ಕೊಟ್ಟರು. ಅದನ್ನು ಕೇಳಿದಮೇಲೆ ಅಮೀರ್ ಕಣ್ಣಲ್ಲಿ ನೀರಿತ್ತು. ಇದನ್ನು ಸಿನಿಮಾ ಮಾಡಬಹುದು ಎಂದು ಮನಸ್ಸನ್ನು ಬದಲಿಸಿದ್ದೇ ಆಗ. ಸಾಕಷ್ಟು ಹುಡುಕಾಡಿದ ಮೇಲೂ ಆಶುತೋಷ್ ಅವರಿಗೆ ನಿರ್ಮಾಪಕರು ಸಿಗಲಿಲ್ಲ. ಯಾಕೆಂದರೆ, ಅದಕ್ಕೆ ದೊಡ್ಡ ಮಟ್ಟದ ಹಣ ತೊಡಗಿಸಬೇಕಿತ್ತು. ಕೊನೆಗೆ ಅಮೀರ್ ಖುದ್ದು ನಿರ್ಮಾಣ ಸಂಸ್ಥೆಯನ್ನು ಹುಟ್ಟುಹಾಕಿ, 25 ಕೋಟಿ ರೂಪಾಯಿಯನ್ನು ಚಿತ್ರಕ್ಕಾಗಿ ಖರ್ಚು ಮಾಡಿದರು. ಹಾಕಿದ ಹಣದ ಮೂರು ಪಟ್ಟನ್ನು ಅದು ಸಂಪಾದಿಸಿತು. ಅಷ್ಟೇ ಅಲ್ಲದೆ, ಆಸ್ಕರ್ ಪ್ರಶಸ್ತಿಗೆ ನಾಮ ನಿರ್ದೇಶನಗೊಂಡ ಚಿತ್ರ ಎನಿಸಿಕೊಂಡಿತು.

ಚಿತ್ರದ ಕ್ಲೈಮ್ಯಾಕ್ಸ್‌ನ ಭಾವುಕ ಕ್ಷಣಗಳನ್ನು ನೆನೆದು ಈಗಲೂ ಕಣ್ಣೀರಾಗುವವರು ಇದ್ದಾರೆ. ■





## ಬರಲಿದೆ ಅಖ್ತರ್ ‘ತೂಫಾನ್’

ಫರ್ಹಾನ್ ಅಖ್ತರ್ ಪಾತ್ರವೊಂದಕ್ಕಾಗಿ ತಮ್ಮ ಬದುಕಿನ ಕೆಲವು ವರ್ಷಗಳನ್ನೇ ನೀಡಲು ಸಿದ್ಧ ಎನ್ನುವುದನ್ನು ‘ಭಾಗ್ ಮಿಲ್ಖಾ ಭಾಗ್’ ಸಿನಿಮಾದಲ್ಲಿ ತೋರಿಸಿಕೊಟ್ಟವರು. ಮಿಲ್ಖಾ ಸಿಂಗ್ ಕ್ರೀಡಾ ಬದುಕನ್ನು ತಾಂತ್ರಿಕವಾಗಿ ಎದ್ದುಕಾಣುವಂತೆ ಭಾವುಕ ಎಳೆಗಳ ಮೂಲಕ, ಮನರಂಜನೆಯ ಒಗ್ಗರಣೆ ಬೆರೆಸಿ ದಾಟಿಸಿದ್ದ ಚಿತ್ರ ಅದು. ರಾಕೇಶ್ ಓಂಪ್ರಕಾಶ್ ಮೆಹ್ರ ನಿರ್ದೇಶನದ ಆ ಸಿನಿಮಾ ಮೂರೂ ತಲೆಮಾರಿನ ಪ್ರೇಕ್ಷಕರಿಗೆ ಹಿಡಿಸಿತ್ತು. ಅಮೀರ್ ಖಾನ್ ಕೂಡ ‘ದಂಗಲ್’ ಸಿನಿಮಾದಲ್ಲಿ ಪೋಘಟ್ ಕುಟುಂಬದ ಕಥನವನ್ನು ಉಣಬಡಿಸಿದ್ದರು. ಮತ್ತೆ ಬಾಕ್ಸಿಂಗ್ ಕಥನವನ್ನು ಫರ್ಹಾನ್ ಹಾಗೂ ರಾಕೇಶ್ ಓಂಪ್ರಕಾಶ್ ಒಂದಾಗಿ ತಯಾರಿಸಿರುವ ‘ತೂಫಾನ್’ ಸಿನಿಮಾ ಬಿಡುಗಡೆಯ ದಿನಾಂಕ ನಿಕ್ಕಿಯಾಗಿದೆ.

ಅಮೆಜಾನ್ ಪ್ರೈಮ್ ಒಟಿಟಿ ವೇದಿಕೆಯಲ್ಲಿ ಜುಲೈ 16ರಂದು ‘ತೂಫಾನ್’ ಬಿಡುಗಡೆಯಾಗಲಿದೆ. ಮೇ ತಿಂಗಳಲ್ಲೇ ತೆರೆಕಾಣಿಸುವ ಯೋಚನೆ ಚಿತ್ರತಂಡದವರಿಗೆ ಇತ್ತು. ಕೋವಿಡ್ ಎರಡನೇ ಅಲೆ ತುಸು ತಗ್ಗಿದರೆ ಹೆಚ್ಚು ವೀಕ್ಷಕರು ಕಣ್ಣು ಕೀಲಿಸಬಹುದು ಎನ್ನುವ ಕಾರಣಕ್ಕೆ ಬಿಡುಗಡೆಯನ್ನು ಮುಂದೂಡಲಾಗಿತ್ತು.

ಮುಂಬೈನ ಡೋಂಗ್ರಿಯಲ್ಲಿ ಹುಟ್ಟಿದ ಅನಾಥ ಅಜ್ಜು ಎಂಬುವವನ ನಿಜ ಬದುಕಿನ ಕಥಾನಕದ ಪ್ರೇರಣೆ ಈ ಚಿತ್ರಕ್ಕಿದೆ. ಗೂಂಡಾ ಆಗಿದ್ದ ಈ ಅನಾಥ ಅನನ್ಯ ಎಂಬ ಪ್ರಾಂಜಲ ಮನಸ್ಸಿನ ಹೆಣ್ಣುಮಗಳ ಸಂಪರ್ಕಕ್ಕೆ ಬಂದಮೇಲೆ ಬದುಕು ಬದಲಾಗುತ್ತದೆ. ಅಜ್ಜು ಎಂಬ ಒರಟು ವ್ಯಕ್ತಿ ಬಾಕ್ಸರ್ ಅಜೀಜ್ ಅಲಿ ಆಗಿ ಹೇಗೆ ಬದಲಾಗುತ್ತಾನೆ ಎನ್ನುವುದು ಕುತೂಹಲಕಾರಿ ಕಥೆ. ಫರ್ಹಾನ್ ತಮ್ಮ ದೇಹವನ್ನು ಬಾಕ್ಸರ್ ತರಹವೇ ಈ ಚಿತ್ರಕ್ಕೆ ರೂಪಿಸಿಕೊಂಡಿರುವುದು ವಿಶೇಷ.

ರಿತೇಶ್ ಸಿಧ್ವಾನಿ, ರಾಕೇಶ್ ಓಂಪ್ರಕಾಶ್ ಮೆಹ್ರ, ಫರ್ಹಾನ್ ಅಖ್ತರ್ ಮೂವರೂ ನಿರ್ಮಿಸಿರುವ ಈ ಚಿತ್ರದಲ್ಲಿ ಪರೇಶ್ ರಾವಲ್, ಮೃಣಾಲ್ ಠಾಕೂರ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ■